# ಮ್ಯಾಕ್ಸ್‌ವೆಲ್ ಮಾಸ್ಟರ್ ಸ್ಟ್ರೋಕ್

**ಪಾದಚಲನೆ ಅಸಾಧ್ಯ ಎನ್ನುವಂಥ ನೋವಿದ್ದಾಗ ಚೆಂಡು ಬ್ಯಾಟ್‌ನ ಅಂಚಿಗೆ ಬಡಿದು ಎತ್ತೆತ್ತಲೋ ಸಾಗುವ ಸಾಧ್ಯತೆ ಹೆಚ್ಚು. ಹಾಗೆ ಆಗದಂತೆ ಮಾಡಿದ್ದು, ಮ್ಯಾಕ್ಸ್‌ವೆಲ್ ಆತ್ಮವಿಶ್ವಾಸ ಹಾಗೂ ನೆಟ್ಸ್‌ನಲ್ಲಿ ಅವರು ಅಭ್ಯಾಸ ಮಾಡಿದ್ದ ಅಸಾಂಪ್ರದಾಯಿಕ ಹೊಡೆತಗಳು.**

■ ಎನ್ವಿ

1984ರಲ್ಲಿ ಇಂಗ್ಲೆಂಡ್ ವಿರುದ್ಧ ವೆಸ್ಟ್‌ಇಂಡೀಸ್ ಒಂದು ಏಕದಿನ ಕ್ರಿಕೆಟ್ ಪಂದ್ಯ ಆಡಿ ಗೆದ್ದಿತ್ತು. ಮ್ಯಾಂಚೆಸ್ಟರ್‌ನಲ್ಲಿ ನಡೆದಿದ್ದ ಆ ಪಂದ್ಯದಲ್ಲಿ ಟಾಸ್ ಗೆದ್ದ ವಿಂಡೀಸ್ ಬ್ಯಾಟಿಂಗ್ ಆಯ್ದುಕೊಂಡು ತಪ್ಪು ಮಾಡಿತ್ತು. ಇಯಾನ್ ಬಾಥಮ್, ಜೆಫ್ ಮಿಲ್ಲರ್ ಇಬ್ಬರೂ ಆ ಕಾಲಘಟ್ಟದಲ್ಲಿ ದಿಗ್ಗಜ ಆಟಗಾರರನ್ನು ಹೊಂದಿದ್ದ ವಿಂಡೀಸ್ ತಂಡದ ಬೇರುಗಳನ್ನೇ ಬುಡಮೇಲು ಮಾಡಿಬಿಟ್ಟರು. ಡೆಸ್ಮಂಡ್ ಹೇನ್ಸ್, ಗಾರ್ಡನ್ ಗ್ರಿನೀಜ್, ರಿಚಿ ರಿಚರ್ಡ್ಸನ್, ಲಾರಿ ಗೋಮ್ಸ್, ಕ್ಲೈವ್ ಲಾಯ್ಡ್, ಜೆಫ್ ಡೂಜನ್, ಮಾಲ್ಕಂ ಮಾರ್ಷಲ್ – ಇಷ್ಟೂ ಮಂದಿ ಔಟಾಗಿ ಪೆವಿಲಿಯನ್ ಸೇರಿದ್ದಾಗ ವಿಂಡೀಸ್ ತಂಡದ ಮೊತ್ತ ಬರೀ 102. ಚ್ಯೂಯಿಂಗ್ ಗಮ್ ಅಗೆಯುತ್ತಾ ಅಷ್ಟೊಂದು ಜನ ಔಟಾದದ್ದನ್ನು ಮೂಕಪ್ರೇಕ್ಷಕನಂತೆ ನೋಡುತ್ತಿದ್ದ ವಿವಿಯನ್ ರಿಚರ್ಡ್ಸ್ ಚೂರೂ ವಿಚಲಿತರಾದಂತೆ ಕಾಣಲಿಲ್ಲ. ಎಲ್ಡೀನ್ ಬ್ಯಾಪ್ಟಿಸ್ಟ್ ಜೊತೆಗೂಡಿ ಎಂಟನೇ ವಿಕೆಟ್‌ಗೆ 59 ರನ್‌ಗಳನ್ನು ಸೇರಿಸಿದರು. ಜೋಯೆಲ್ ಗಾರ್ನರ್ ಕೂಡ ಬೇಗ ಔಟಾಗಿಬಿಟ್ಟರು. ಆಗ ತಂಡದ ಮೊತ್ತ ಕೇವಲ 166. ಇದ್ದುದು ಒಂದೇ ವಿಕೆಟ್. ಮೈಕಲ್ ಹೋಲ್ಡಿಂಗ್ ಆಡಲು ಬಂದರು. ಅಲ್ಲಿಂದ 272ರವರೆಗೆ ರಿಚರ್ಡ್ಸ್ ತಂಡದ ಸ್ಕೋರ್ ಹಿಗ್ಗಿಸಿದರು. ಔಟಾಗದೆ ಅವರು 186 ರನ್ ಗಳಿಸಿ ನಗುನಗುತ್ತಾ ಪೆವಿಲಿಯನ್‌ಗೆ ಮರಳಿದರು. 21 ಬೌಂಡರಿ, ಐದು ಸಿಕ್ಸರ್‌ಗಳ ರಸದೌತಣದ ಇನಿಂಗ್ಸ್ ಅದು. ತೆಗೆದುಕೊಂಡಿದ್ದು 170 ಎಸೆತಗಳನ್ನಷ್ಟೆ. ಹೋಲ್ಡಿಂಗ್ ಬರೀ 27 ಎಸೆತಗಳನ್ನು ಆಡುವಂತೆ ಅವರು ನೋಡಿಕೊಂಡಿದ್ದರು. ಆಮೇಲೆ ಇಂಗ್ಲೆಂಡ್ 168ಕ್ಕೆ ಕುಸಿದಿತ್ತು.

ಮೊನ್ನೆ ಗ್ಲೆನ್ ಮ್ಯಾಕ್ಸ್‌ವೆಲ್, ವಿಶ್ವಕಪ್ ಕ್ರಿಕೆಟ್ ಪಂದ್ಯದಲ್ಲಿ ಅಫ್ಘಾನಿಸ್ತಾನ ತಂಡದ ವಿರುದ್ಧ ಪ್ರಮುಖ ಏಳು ವಿಕೆಟ್‌ಗಳು ಬಿದ್ದ ನಂತರವೂ ಔಟಾಗದೆ 201 ರನ್ ಗಳಿಸಿ ಪಂದ್ಯವನ್ನು ಗೆದ್ದುಕೊಂಡು ಹೋದಾಗ ಮೇಲಿನ ಇನಿಂಗ್ಸ್ ನೆನಪಾಯಿತು. ಅದೇ ದಿಟ್ಟತನ, ಅದೇ ಕಾಠಿಣ್ಯ. ಅದೇ ಅದೃಷ್ಟ. ಆದರೆ, ವ್ಯತ್ಯಾಸ ಇದ್ದುದು, ಕಾಲಿನಲ್ಲಿ ಪರಮ ಯಾತನೆ ಇಟ್ಟುಕೊಂಡು ಕೊನೆಯ 75 ರನ್‌ಗಳನ್ನು ಮ್ಯಾಕ್ಸ್‌ವೆಲ್, ಪ್ಯಾಟ್ ಕಮಿಂಗ್ಸ್ ಜೊತೆಗೂಡಿ ಸೇರಿಸಿದ್ದರಲ್ಲಿ. ಗುರಿಯ ಬೆನ್ನುಹತ್ತುವಾಗ ನರನಾಡಿಗಳಲ್ಲಿ ನೋವಿದ್ದೂ ಗೆಲುವಿನ ನಗು ಚೆಲ್ಲಿದ್ದರಲ್ಲಿ. ಚೇಸ್ ಮಾಡುವಾಗ ದಾಖಲಾದ ಮೊದಲ ದ್ವಿಶತಕ ಎನ್ನುವ ಅಗ್ಗಳಿಕೆಯಲ್ಲಿ.

ಹಿಂದೊಮ್ಮೆ ದಕ್ಷಿಣ ಆಫ್ರಿಕಾದ ಹರ್ಷೆಲ್ ಗಿಬ್ಸ್ 435 ರನ್‌ಗಳ ಗುರಿ ಎದುರಲ್ಲಿದ್ದಾಗ, 175 ರನ್‌ಗಳನ್ನು ಸಿಡಿಸಿ ಇದೇ ಆಸ್ಟ್ರೇಲಿಯಾ ವಿರುದ್ಧ ಪಂದ್ಯ ಗೆದ್ದುಕೊಟ್ಟಿದ್ದರು. ಕಾಂಗರೂ ದೇಶದ ಆಟಗಾರರು ಬೆವರಿಳಿಸುವಂತೆ ಸ್ಟ್ರೋಕ್‌ಗಳ ಸೊಗಸುಗಾರಿಕೆ ತೋರಿದ್ದ ಸಚಿನ್ ತೆಂಡೂಲ್ಕರ್ 143 ರನ್‌ಗಳನ್ನು ಜಮೆ ಮಾಡಿದ ಉದಾಹರಣೆಯೂ ಎದುರಲ್ಲಿ ಇದೆ. ರೋಹಿತ್ ಶರ್ಮ ದ್ವಿಶತಕದ (264) ಖದರನ್ನು ಕೂಡ ಮರೆಯಲು ಸಾಧ್ಯವಿಲ್ಲ. 1983ರ ವಿಶ್ವಕಪ್‌ನಲ್ಲಿ ಭಾರತ ತಂಡದ ಅರ್ಧದಷ್ಟು ಬ್ಯಾಟ್ಸ್‌ಮನ್‌ಗಳು 17 ರನ್‌ಗಳಾಗುವಷ್ಟರಲ್ಲಿ ಪೆವಿಲಿಯನ್ ಸೇರಿದ್ದಾಗ, ಶವರ್ ತೆಗೆದುಕೊಳ್ಳುತ್ತಿದ್ದ ನಾಯಕ ಕಪಿಲ್ ಓಡೋಡಿ ಬಂದು, ಆಡಿ ಔಟಾಗದೆ 175 ರನ್ ಗಳಿಸಿ ಗೆಲುವನ್ನೂ ದಕ್ಕಿಸಿಕೊಟ್ಟ ವಿಕ್ರಮದ ಕಥನ ಹೊಸ ತಲೆಮಾರಿಗೂ ದಾಟುತ್ತಲೇ ಇದೆ. ಇಂತಹ ಕ್ರಿಕೆಟ್‌ನ ಮರೆಯಲಾಗದ ಅಧ್ಯಾಯಗಳ ಸಂಪುಟಕ್ಕೆ ಮ್ಯಾಕ್ಸ್‌ವೆಲ್ ಇನಿಂಗ್ಸನ್ನು ನಿಸ್ಸಂಶಯವಾಗಿ ಸೇರಿಸಬೇಕು.

ಅಫ್ಘಾನಿಸ್ಥಾನದ ಎದುರು ಆಡಲು ಮ್ಯಾಕ್ಸ್‌ವೆಲ್ ಮೈದಾನಕ್ಕೆ ಇಳಿದಾಗ ತಂಡದ ಸ್ಕೋರ್ 49ಕ್ಕೆ 4. ಎದುರಿಸಿದ ಮೊದಲ ಎಸೆತದಲ್ಲೇ ಔಟಾಗುವ ಆತಂಕವಿತ್ತು. ಆಫ್ಘನ್ನರು ‘ರಿವ್ಯೂ’ ಕೇಳಿದರು. ಅಜ್ಮತ್ತುಲ್ಲಾ ಒಮರ್‌ಜಾಯ್ ಆಗ ಹ್ಯಾಟ್ರಿಕ್ ಅವಕಾಶದ ಕನಸು ಕಾಣುತ್ತಿದ್ದ ಸಂದರ್ಭ. ಚೆಂಡು ಬ್ಯಾಟ್‌ನ ಅಂಚಿಗೆ ಬಡಿದು, ಒಮ್ಮೆ ಪುಟಿದು ವಿಕೆಟ್ ಕೀಪರ್ ಕೈಸೇರಿದ್ದರಿಂದ ಮ್ಯಾಕ್ಸ್‌ವೆಲ್ ಬಚಾವಾದರು. ಆಮೇಲೆ ಎರಡು ಸಲ ಜೀವದಾನಗಳು ಸಿಕ್ಕವು. ಅಲ್ಲಿಂದಾಚೆಗೆ ಮ್ಯಾಕ್ಸ್‌ವೆಲ್ ಅಡ್ಡ ಬ್ಯಾಟ್‌ನಿಂದ ಬೌಂಡರಿ ಗೆರೆಯನ್ನು ಚೆಂಡು ಪದೇಪದೇ ದಾಟುವಂತೆ ಆಡಿದರು. ಪಾದಚಲನೆ ಅಸಾಧ್ಯ ಎನ್ನುವ ಸ್ಥಿತಿ ತಲುಪಿದಾಗ ನಿಂತಲ್ಲೇ ದೇಹದ ಸಮತೋಲನ ಕಾಪಾಡಿಕೊಂಡು ಹೊಡೆದ ಶಾಟ್‌ಗಳಂತೂ ದಂಗುಬಡಿಸುವಂತಿದ್ದವು. ಅಂತಹ ನೋವು ಇದ್ದಾಗ ಚೆಂಡು ಬ್ಯಾಟ್‌ನ ಅಂಚಿಗೆ ಬಡಿದು ಎತ್ತೆತ್ತಲೋ ಸಾಗುವ ಸಾಧ್ಯತೆಯೇ ಹೆಚ್ಚು. ಹಾಗೆ ಆಗದಂತೆ ಮಾಡಿದ್ದು– ಮ್ಯಾಕ್ಸ್‌ವೆಲ್ ಆತ್ಮವಿಶ್ವಾಸ ಹಾಗೂ ನೆಟ್ಸ್‌ನಲ್ಲಿ ಅವರು ಅಭ್ಯಾಸ ಮಾಡಿದ್ದ ಅಸಾಂಪ್ರದಾಯಿಕ ಹೊಡೆತಗಳು.

1984ರಲ್ಲಿ ರಿಚರ್ಡ್ಸ್ ಹೊಡೆದಿದ್ದಷ್ಟೇ, ಅಂದರೆ 21 ಬೌಂಡರಿಗಳನ್ನು ಮ್ಯಾಕ್ಸ್‌ವೆಲ್ ಗಳಿಸಿದರು. 10 ಸಿಕ್ಸರ್‌ಗಳು ಅಪರೂಪದಲ್ಲಿ ಅಪರೂಪ. ಅಷ್ಟು ಕೆಟ್ಟ ಸ್ಥಿತಿಯಲ್ಲಿ ತಂಡವಿದ್ದಾಗ ಬರೀ 128 ಎಸೆತಗಳಲ್ಲಿ ಗೆಲುವಿನ ಗುರಿ ಮುಟ್ಟುವುದು ವಿಕ್ರಮವೇ. 91ಕ್ಕೆ ಏಳು ವಿಕೆಟ್ ಬಿದ್ದಿದ್ದಂತಹ ತಂಡವನ್ನು ಆಮೇಲೆ ಒಂದೂ ವಿಕೆಟ್ ಕಳೆದುಕೊಳ್ಳದೆ 290ರ ಗಡಿ ದಾಟಿಸುವುದು ತಮಾಷೆಯಾ?



ಪ್ರತಿಕ್ರಿಯಿಸಿ: feedback@sudha.co.in